ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಗುಬ್ಬಿತಾಲ್ಲೂಕು ನಿಟ್ಟೂರು ಗ್ರಾಮದ ಹರಿಜನರು ಅಲ್ಲಿ ಫಾರಂ ಮಾಡುವುದಕ್ಕೆ ಅವಕಾಶಕೊಡಬೇಕೆಂದು ಮನವಿಮಾಡಿದ್ದರೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡ.—ಕೋ-ಆಪರೇಟಿವ್ ಫಾರಂ ಮಾಡುವುದಕ್ಕೆ ಮುಂಚೆ ಜಮೀನಿಲ್ಲದವರಿಗೆ ಹಂಚಬೇಕು, ಒಂದು ಕುಟುಂಬಕ್ಕಾಗುವಷ್ಟು ಹಂಚಿದರೆ ಫಾರಂ ಮಾಡಲು ಅನುಕೂಲವಾಗುತ್ತದೆ ಎಂಬುದನ್ನು ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಬಿ. ಹುಚ್ಚೇಗೌಡ.—ನರ್ಕಾರದವರು ಆ ರೀತಿ ತೀರ್ಮಾನಕ್ಕೆ ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಕೋ-ಆಪರೇಟಿವ್ ಫಾರ್ಮಿಂಗ್ ಮಾಡುವುದಕ್ಕೆ ಸಾಧ್ಯವಿಲ್ಲದೆ, ಜಮೀನಿಲ್ಲದಿರುವವರಿಗೆ ಹಂಚಬೇಕೆಂದು ತಿಳಿಸಿಯೆಂದ ಆಗಲೇ ಹೇಳಿದೆ.

Arasinakere Tank near Chelur in Gubbi Taluk.

Q.—899. **Sri B. C. NANJUNDAIYA** (Kolar).—

Will the Government be pleased to state :—

(*a*) the number of times the Arasinakere Tank near Chelur in Gubbi Taluk discharged for the last ten years ;

(*b*) whether it is not a fact that because ' Sulekalve ' which was originally feeding this tank is deviated to Kallambella Tank, this tank is not getting enough water ;

(*c*) whether they will think of allowing this ' Sulekalve ' water to this Arasinakere Tank ?

A.—**Sri Kadidal MANJAPPA** (Minister for Revenue and Public Works).—

(*a*) Twice.

(*b*) No.

(*c*) Does not arise in view of (*b*).

ಶ್ರೀ ಬಿ. ಸಿ. ನಂಜುಂಡಯ್ಯ.—(*b*) ಪ್ರಶ್ನೆಗೆ ಉತ್ತರವಾಗಿ ' No ' ಎಂದು ಹೇಳಿರುವುದಕ್ಕೆ ಆಧಾರ ವೇನು?

ಶ್ರೀ ಕಡಿದಾಳ್ ಮಂಜಪ್ಪ.—ಸ್ಥಳೀಯ ಅಧಿಕಾರಿಗಳು ಪರಿಶೀಲನೆ ಮಾಡಿ ವರದಿ ಮಾಡಿರುವ ಪ್ರಕಾರ.

ಶ್ರೀ ಬಿ. ಸಿ. ನಂಜುಂಡಯ್ಯ.—ಆದರೂ ಕೂಡ ಈ ವಿಷಯವನ್ನು ಮತ್ತೊಂದು ಸಲ ಪರಿಶೀಲಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲಿಸುತ್ತೇವೆ.

Bore-Wells in Villages of Chamarajanagar Taluk.

Q.—976. **Sri U. M. MADAPPA** (Chamarajanagar).—

Will the Government be pleased to state :—

(*a*) the names of villages in Chamarajanagar Taluk, which have bore-wells ;

(*b*) of them, the names of villages which are not deriving any benefit from the bore-wells even though such wells exist ;

(*c*) the reasons thereof ;

(*d*) when these wells were constructed ;

(*e*) the approximate expenditure incurred on each of these wells ;

(*f*) who were responsible for the construction of these wells ;

(*g*) the department under which the management vests at present ?

A.—**Sri Kadidal MANJAPPA** (Minister for Revenue and Public Works).—

(*a*) 1 Udigala, 2 Kuderu, 3 Heggavadipura, 4 Dasahalli, 5 Santhemarahalli and 6 Mamballi.

(*b*) Kuderu and Udigala.

(*c*) Pumpsets have not been fixed and harnessing of these wells has yet to be done.

(*d*) 1 Udigala : in August 1942.
2 Kuderu : in April 1941.
3 Heggavadipura : in January 1944.
4 Dasahalli : 14th January 1945.
5 Santhemaraha li : in July 1931, November 1945 and June 1945.
6 Mamballi : in june 1945.

(*e*) About Rs. 3,000 per bore-well.

(*f*) The former Bureau of Sanitary Engineering, Bangalore, executed these wells at the request of the local bodies.

(*g*) The Village Panchayet is in charge in respect of items 1 to 4 and 6. The bore-wells at Santhemarahalli are maintained by the Public Works Department.

ಶ್ರೀ ಯು. ಎಂ. ಮಾದಪ್ಪ.—ಕುದೇರು ಗ್ರಾಮಕ್ಕೆ ಪಂಪುಸೆಟ್ಟು ಮಂಜೂರಾಗಿದೆಯೇ?